ಸೇವೆಯನ್ನು ಸಲ್ಲಿಸಿರಬೇಕು, ಆದರೆ ಎಂಟು ವರ್ಷಗಳ ಸೇವೆ ಸಲ್ಲಿಸಿದವರು ಇಲ್ಲದ ಪಕ್ಷದಲ್ಲಿ ಕನಿಷ್ಠ ಸತತವಾಗಿ 5 ವರ್ಷಗಳ ಸೇವೆ ಸಲ್ಲಿಸಿದವರನ್ನು ಮುಂಬಡ್ತಿಗೆ ಪರಿಗಣನೆಗೆ ತೆಗೆದು ಕೊಳ್ಳಲಾಗುವುದು.

2) ಮುಂಬಡ್ತಿ ನೀಡುವಾಗ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದವರಿಗೆ ಮೀಸಲಿಟ್ಟ ಕೋಟಾವನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದು.

3) ಅವರ ವಾರ್ಷಿಕ ಗೋಪ್ಯ ವರದಿಯನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುತ್ತದೆ.

ಆ) ಮತ್ತು ಇ) ಮುಂಬಡ್ತಿಯನ್ನು ನೀಡಲು ಜೇಷ್ಠತಾ ಪಟ್ಟಿಯನ್ನು ಅನುಸರಿಸಲಾಗುತ್ತಿದೆ. ಮುಖ್ಯ ಪೇದೆಗಳಿಗೆ ಬಡ್ತಿ ನೀಡುವಾಗ ಪದವೀಧರರಾಗಿರುವುದು ಅಥವಾ 40 ವರ್ಷ ವಯಸ್ಸಾಗಿರುವುದನ್ನು ಗಣನೆಗೆ ತೆಗೆದುಕೊಳ್ಳಲು ನಿಯಮದ ಅಡಿಯಲ್ಲಿ ಅವಕಾಶವಿರುವುದಿಲ್ಲ.

ಈ) ಪಿ.ಎಸ್.ಐ.ಗಳನ್ನು ಆಯ್ಕೆ ಮಾಡಲು ನಿಗಧಿ ಪಡಿಸಿದ ಪರೀಕ್ಷೆಗಳಲ್ಲಿ ಅಭ್ಯರ್ಥಿಗಳು ತೋರುವ ಸಾಮರ್ಥ್ಯದ ಆಧಾರದ ಮೇಲೆ ಅವರನ್ನು ಪಿ.ಎಸ್.ಐ.ಗಳನ್ನಾಗಿ ನೇಮಕ ಮಾಡಲಾಗುತ್ತದೆ.

ಕೊಡಗು ಜಿಲ್ಲೆ ಸೋಮವಾರ ಪೇಟೆ ತಾಲ್ಲೂಕಿನ ಚಿಕ್ಲ ಹೊಳೆ ಜಲಾಶಯಕ್ಕೆ ಹಣ ಬಿಡುಗಡೆ

1359 (1573) ಶ್ರೀ ಅಪ್ಪಚ್ಚು ರಂಜನ್.ಎಂ.ಪಿ.(ಸೋಮವಾರಪೇಟೆ) : ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ. ಕೊಡಗು ಜಿಲ್ಲೆ, ಸೋಮವಾರಪೇಟೆ ತಾಲ್ಲೂಕಿನ ಚಿಕ್ಲಿಹೊಳೆ ಜಲಾಶಯಕ್ಕೆ ಎಷ್ಟು ಹಣ ಬಿಡುಗಡೆಯಾಗಿದೆ ;

ಆ) ಎಷ್ಟು ಖರ್ಚಾಗಿದೆ ;

ಇ) ಈ ಕಾಮಗಾರಿ ಪೂರ್ಣಗೊಂಡಿದೆಯೇ;

ಈ) ಇನ್ನು ಎಷ್ಟು ಕಾಮಗಾರಿ ಬಾಕಿ ಇದೆ ;

ಉ) ಮಂಜೂರಾದ ಹಣದಲ್ಲಿ ಎಷ್ಟು ಬಾಕಿ ಇದೆ? (ವಿವರಣೆ ಕೊಡಿ)

ಶ್ರೀ ಎಚ್.ಕೆ. ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು) :

ಅ) ಪ್ರಾರಂಭದಿಂದ ರೂ. 1647.90 ಲಕ್ಷಗಳು ಬಿಡುಗಡೆಯಾಗಿದೆ.

ಆ) 3/2000ದವರೆಗೆ ಆದ ಖರ್ಚು ರೂ. 1647.90 ಲಕ್ಷಗಳು .

ಇ) ಇಲ್ಲ.

ಈ) ರಸಲ್‌ಪುರ ಗ್ರಾಮದ ಸರ್ವೆ ನಂ. 30ರಲ್ಲಿ 300 ಮೀ. ಕಾಲುವೆ ಆಗೆತದ ಕೆಲಸ ಬಾಕಿ ಉಳಿದಿರುತ್ತದೆ.

ಉ) 2000-2001 ಸಾಲಿನ ಆಯವ್ಯಯದಲ್ಲಿ ರೂ. 100 ಲಕ್ಷ ಒದಗಿಸಲಾಗಿದೆ.